ಕರ್ನಾಟಕ ಸರ್ಕಾರ

**ರಾಷ್ಟ್ರೀಯ ಸೇವಾ ಯೋಜನೆ**

**ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012**

ಸಂಖ್ಯೆ: ಪಪೂಶಿಇ/ರಾಸೇಯೋ/ವಿ.ಶಿ./2017-18 ದಿನಾಂಕ: 14/12/2017

**ಜ್ಞಾಪನ**

**ವಿಷಯ:** ದಿನಾಂಕ: 03-01-2018 ರಿಂದ 05-01-2018ರ ವರೆಗೆ ನಡೆಯಲಿರುವ ರಾಷ್ಟ್ರೀಯ ಸೇವಾ ಯೋಜನೆಯ ಬಾಲಕರ ಯುವಜನೋತ್ಸವಕ್ಕೆ ಬಾಲಕರನ್ನು ನಿಯೋಜಿಸುವ ಬಗ್ಗೆ.

ಪದವಿಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಮತ್ತು **ಮಹಾತ್ಮಾಗಾಂಧಿ ಸರ್ಕಾರಿ ಪದವಿ ಪೂರ್ವ ಕಾಲೇಜು** ಕುಣಿಗಲ್ ತುಮಕೂರು. ಇವರ ಸಂಯುಕ್ತ ಆಶ್ರಯದಲಿ ರಾಜ್ಯ ಮಟ್ಟದ ಬಾಲಕರ 'ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆಗಾಗಿ ವಿದ್ಯಾರ್ಥಿಗಳು ಶಿಬಿರವನ್ನು "ಆರೋಗ್ಯವಂತ ಭಾರತಕ್ಕಾಗಿ ಆರೋಗ್ಯವಂತ ಯುವಕರು"ಎಂಬ ಧ್ಯೇಯದೊಂದಿಗೆ ದಿನಾಂಕ: 03-01-2018 ರಿಂದ 05-01-2018ರ ವರೆಗೆ **ಕಾಡ ಶೆಟ್ಟಿಹಳ್ಳಿ, ಅಮೃತೂರು ಹೋ॥, ಕುಣಿಗಲ್ ತಾ॥, ತುಮಕೂರು ಜಿಲ್ಲೆ** ಇಲ್ಲಿ ಆಯೋಜಿಸಲಾಗಿದೆ. ಈ ಶಿಬಿರಕ್ಕೆ ತಮ್ಮ ಕಾಲೇಜಿನ ಉತ್ತಮ ಆರೋಗ್ಯವಂತ ಸಾಂಸ್ಕ್ರತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ 02 ಬಾಲಕರನ್ನು ನಿಯೋಜಿಸಲು ಸೂಚಿಸಿದೆ. ನಿಯೋಜನೆಗೊಂಡ ಬಾಲಕರು ದಿನಾಂಕ: 03-01-2018 ರ ಬೆಳಿಗ್ಗೆ 8.00 ಗಂಟೆಗೆ ಶಿಬಿರ ನಡೆಯುವ ಸ್ಥಳದಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಶಿಬಿರಾರ್ಥಿಗಳು ಶಿಬಿರಕ್ಕೆ ಆಗಮಿಸುವಾಗ ಈ ಕೆಳಕಂಡ ಸೂಚನೆಗಳನ್ನು ಗಮನಿಸಬೇಕು.

1. ಶಿಬಿರಕ್ಕೆ ಆಗಮಿಸುವಾಗ ಗುರುತಿನ ಪತ್ರ, ಇಂಡೆಮ್ನಿಟಿ ಬಾಂಡ್/ತಂದೆ/ತಾಯಿ/ಪೋಷಕರ ಒಪ್ಪಿಗೆ ಪತ್ರ (ಕಡ್ಡಾಯವಾಗಿ ತರಬೇಕು)
2. ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳಿಂದ ನಿಯೋಜನೆ ಪತ್ರ ತರಬೇಕು.
3. ಊಟದ ತಟ್ಟೆ, ಲೋಟ, ಲಘು ಹಾಸಿಗೆ ಮತ್ತು ಹೊದಿಕೆ, ಉಡುಪು, ಟಾರ್ಚ ಇತರೆ ವಸ್ತುಗಳನ್ನು ತರಬೇಕು.
4. ಶಿಬಿರಕ್ಕೆ ಆಗಮಿಸುವ ಶಿಬಿರಾರ್ಥಿಗಳ ಪ್ರಯಾಣ ಭತ್ಯೆ ಎನ್.ಎಸ್.ಎಸ್ ಶುಲ್ಕ ನಿಧಿಯಿಂದ ಭರಿಸುವುದು. ಉತ್ತಮ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಸಂಘಟಕರು ಮಾಡುವರು..
5. ಶಿಬಿರದ ನಿಯಮಗಳನ್ನು ಶಿಬಿರಾರ್ಥಿಗಳು ಕಡ್ಡಾಯವಾಗಿ ಪಾಲಿಸಬೇಕು ಮತ್ತು ಬೆಲೆ ಬಾಳುವ ವಸ್ತುಗಳನ್ನು ಶಿಬಿರಕ್ಕೆ ತರಬಾರದು.

**ತಮ್ಮ ವಿಶ್ವಾಸಿ**

ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಮಾಹಿತಿಗಾಗಿ ಸಂಪರ್ಕಿಸಿ:

ಗೋವಿಂದ ರಾಜು ಸಿ.ಕೆ. ಪ್ರಾಂಶುಪಾಲರು – 9945176486

ಕೆ.ಎನ್.ಶಿವಮಾದಯ್ಯ (ಸಹಾಯಕ ಸಂಯೋಜನಾಧಿಕಾರಿಗಳು ಬೆಂಗಳೂರು ವಿಭಾಗ) ಸಂಖ್ಯೆ: 9964070157

ಎಸ್. ಕುಮಾರಯ್ಯ ಶಿಬಿರಾಧಿಕಾರಿಗಳು- 9448956214/9008247414

ಟಿ.ಪಿ. ರಮೇಶ್- 8970575639

**ವಿಶೇಷ ಸೂಚನೆ:**

ಶಿಬಿರ ನಡೆಯುವ ಸ್ಥಳ: ಕಾಡ ಶೆಟ್ಟಿಹಳ್ಳಿ, ಅಮೃತೂರು ಹೋ॥, ಕುಣಿಗಲ್ ತಾ॥, ತುಮಕೂರು ಜಿಲ್ಲೆ

ಬಸ್ ಮಾರ್ಗ : ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹೇಮಾವತಿ ಕ್ರಾಸ್ ಬಳಿ ಇಳಿದು ಮಾರ್ಕೋನ ಹಳ್ಳಿ ಡ್ಯಾಮ್ ರಸ್ತೆಯಲ್ಲಿ 3 ಕಿ.ಮೀ ದೂರದಲ್ಲಿರುವ ಕಾಡ ಶೆಟ್ಟಿಹಳ್ಳಿ.